
University of Mysore

Department of studies in sanskrit



# ECOLOGY IN SANSKRIT LITERATURE

## संस्कृतसाहित्ये पर्यावरणचिन्तनम्

**ECOLOGY IN SANSKRIT LITERATURE** - a compendium of the articles at the National seminar held on 26th February - 2020 at **Department of Studies in Sanskrit,** Manasagangotri, University of Mysore, Mysuru - 06

Pages : ix + 351 = 360

Size : Demy 1/8

Edition : 2020

Copies : 100

Price : 300/-

Copy Right : Author

Published by : Department of Studies in Sanskrit,
Manasagangotri, University of Mysore, Mysuru - 06

ISBN No. : 978 - 1 - 56646-725-4

Printing : Swathi Printing & Tradesr, Mysuru
Mobile : 9844266994

| | | | |
|---|---|---|---|
| 34 | ಭವಭೂತಿಯ ಉತ್ತರರಾಮಚರಿತ ನಾಟಕದಲ್ಲಿನ ಪರಿಸರ ವರ್ಣನೆ | Dr. Mallanagowda S. | 253 |
| 35 | ವಾಲ್ಮೀಕಿ ರಾಮಾಯಣದ ಸುಂದರ ಕಾಂಡದಲ್ಲಿನ ಅಶೋಕವನ ವರ್ಣನೆ | Tejaswini Bidari | 260 |
| 36 | ರಾಮಾಯಣದಲ್ಲಿ ಪರಿಸರ ಪ್ರಜ್ಞೆ | Dr. Pushpalatha S. M. | 268 |
| 37 | ಸಂಸ್ಕೃತಸಾಹಿತ್ಯೇ ಪರಿಸರಸ್ಯ ವರ್ಣನಮ್–ಸಂರಕ್ಷಣಮ್ | Dr. Jayarevanna M. V. | 277 |
| 38 | ಶೈವಾಗಮಗಳಲ್ಲಿ ಪರಿಸರಗಳ ಸಮಾಲೋಚನೆ | B. R. Umeshkumar | 292 |
| 39 | ನೈಷಧ ಕಾವ್ಯದಲ್ಲಿ ಪರಿಸರ ಪಾತ್ರ | Dr. Bheemanayak S. | 297 |
| | **HINDI** | | |
| 40 | भारतीय संस्कृति, साहित्य और जलप्रदूषण | Prof. Pratibha Mudaliyar | 302 |
| | **ENGLISH** | | |
| 41 | Description of Ecology in the works of Bhavabhuti | Dr. Nagalakshmi.S | 311 |
| 42 | Ecology in Sanskrit Literature Ecology in Ayurveda | Dr. Ashwini | 318 |
| 43 | India's Ancient Town Planning: A Whopping Ecological Balance | Vishwanatha Bhat | 327 |
| 44 | Environmental Awareness in the Works of Kalidasa's Poetry | Dr. Komala.M.S | 331 |
| 45 | The Sun & Biosphere: Perspectives from Vedas & Ramayana with respect to Modern Ecology | Srinithya Ravinuthala | 343 |
| 46 | Evocation of Ecology concepts in Mahakavi Kalidasa's Minor poem A.Muthuselvi | P.K.Kasthuri | 348 |

ISBN 978-1-56646-725-4

# ಸಂಸ್ಕೃತಸಾಹಿತ್ಯೇ ಪರಿಸರಸ್ಯ ವರ್ಣನಮ್-ಸಂರಕ್ಷಣಮ್

ಡಾ.ಜಯರೇವಣ್ಣ.ಎಂ.ವಿ
ಸಹಾಯಕ ಪ್ರಾಧ್ಯಾಪಕರು, ಸಂಸ್ಕೃತ ಭಾಷಾ ಮತ್ತು ಸಾಹಿತ್ಯ,
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ,
ಚಾಮರಾಜಪೇಟೆ, ಬೆಂಗಳೂರು. 560018.
ಮೋಬೈಲ್ ನಂಬರ್:9972005782

ಆಧುನಿಕ ಯುಗದಲ್ಲಿ ಪರಿಸರದ ಕಾಳಾಜಿ ಹೆಚ್ಚಾಗುತ್ತಿರುವುದನ್ನು ನೋಡಬಹುದ್ದಾಗಿದೆ, ಪ್ರಕೃತಿಯನ್ನು ಮಾನವನು ನಾಶಮಾಡಿದ್ದರೆ ಮಾನವನೇ ನಾಶವಾಗುತ್ತಾನೆ. ಮಾನವಕೃತವಾದ ವಸ್ತುಗಳು ಶಾಶ್ವತವಾಗಿರುವುದು ಕಷ್ಟ;, ಪ್ರಕೃತಿಯನ್ನು ಮಾನವನಿಂದ ಬದಲಾಯಿಸಲು ಸಾಧ್ಯವಿಲ್ಲ, ಮಾನವನು ತನಗೆ ಇಷ್ಟಬಂದಂತೆ ಪರಿಸರವನ್ನು ಬಳಕೆ ಮಾಡಿಕೊಂಡು ಸ್ವಾರ್ಥಕ್ಕಾಗಿ ಸಂಪೂರ್ಣ ನಾಶಮಾಡಿರುವುದರಿಂದ; ಮಾನವನು ಈಗ ಪಶ್ಚಾತ್ತಾಪವನ್ನು ಪಡುತ್ತಿದ್ದು ವಿಧಿಯನಿಯಮವನ್ನು ಮೀರಿರವರು ಯಾರುವಿಲ್ಲವೆಂಬ ಅರಿವಿನ ಫಲವಾಗಿ; ಪ್ರಕೃತಿಯಿಲ್ಲದೇ ಮಾನವನು ಬದುಕಲು ಸಾಧ್ಯವಿಲ್ಲವೆಂಬುದನ್ನರಿತ ಮಾನವನು ಪ್ರಕೃತಿಯ ಉಳುವಿನ ಬಗ್ಗೆ ಹೆಚ್ಚು ಹೆಚ್ಚು ಗಮನವರಿಸುತ್ತಿರುವುದು ಅನಿವಾರ್ಯವಾಗಿದೆ.

ಪರಿಸರವೆಂಬ ಪದವು 'ಪರಿ' ಎಂಬ ಉಪಸರ್ಗ ಪೂರ್ವಕವಾಗಿ 'ಸೃ' ಧಾತುವಿನಿಂದ ಕೂಡಿದ್ದು, ಆಂಗ್ಲಭಾಷೆಯಲ್ಲಿ ಇಕಾಲಜಿ ಎಂದು ಕರೆಯುತ್ತಾರೆ. ಭೂಮಿ, ಸೂರ್ಯ, ಗ್ರಹಗಳ ಸೌರವ್ಯೂಹದಲ್ಲಿ ತನ್ನದೇ ಆದ ಕಕ್ಷೆಯಲ್ಲಿ ಸುತ್ತುತ್ತಿರುವ ಇತರ ಗ್ರಹಗಳ ಜೊತೆ ಸಂಬಂಧವುಳ್ಳ ಈ ಎಲ್ಲವೂ ಪರಿಸರ ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳಿವೆ, ಸುತ್ತಮುತ್ತಲು ಇರುವ ವಸ್ತುಗಳು, ಪ್ರದೇಶ, ಪರಿಸ್ಥಿತಿ, ಜಲಚರ, ವನಚರ, ಸಸ್ಯ ಸಂಕುಲ ಜಡಪದಾರ್ಥಗಳು ಮುಂತಾದ ಸುತ್ತಮುತ್ತಲಿನ ಒಟ್ಟಾರೆ ಜಗತ್ತನ್ನು ಅವಲೋಕಿಸುವುದಕ್ಕೆ ಪರಿಸರ ಚಿತ್ರಣವೆನ್ನಬಹುದು.

ಒಂದು ಜೀವಿ, ವ್ಯಕ್ತಿ, ಸಮುದಾಯವು ಜೀವಿಸುತ್ತಿರುವ ಸ್ಥಳದ ಎಲ್ಲಾ ಭೌತಿಕ ಮತ್ತು ಜೈವಿಕ ಅಂಶಗಳನ್ನು ಒಳಗೊಂಡಿರುವುದಕ್ಕೆ ಪರಿಸರ ಎನ್ನುತ್ತಾರೆ.

ಜೀವಶಾಸ್ತ್ರಜ್ಞ **ಜಾಕೋಬ್ ವಾನ್ ಉಯರ್ ಕುಲ್** ರವರ ಪ್ರಕಾರ

ISBN 978-1-56646-725-4

ಜೀವಿಗಳು ವಾಸಿಸುತ್ತಿರುವ ಸ್ಥಳದ ಸುತ್ತಲಿನ ವಿವಿಧ ಅಂಶಗಳನ್ನು ಪರಿಸರವೆನ್ನುತ್ತಾರೆ.

**ಯೂನಿವರ್ಸಲ್ ವಿಶ್ವಕೋಶದಲ್ಲಿ** ಒಂದು ಜೀವಿ, ಪ್ರಭೇದ ಅಥವಾ ಜನಾಂಗದ ಅಭಿವೃದ್ಧಿ, ಬೆಳವಣಿಗೆ, ಜೀವನ ಮತ್ತು ಮೃತ್ಯುವಿನ ಮೇಲೆ ಪ್ರಭಾವ ಬೀರುವ ಪರಿಸ್ಥಿತಿ ಹಾಗೂ ಜೀವಿಗಳ ಒಟ್ಟು ಪರಿಸ್ಥಿತಿಯನ್ನು ಪರಿಸರವೆನ್ನುತ್ತಾರೆ.

**ಬ್ರಿಟಾನಿಕ್ ವಿಶ್ವಕೋಶದಲ್ಲಿ** ಒಂದು ಜೀವಿಯ ಭೌತಿಕ ಹಾಗೂ ಜೈವಿಕ ಅಂಶಗಳನ್ನು ಪರಿಸರವೆನ್ನುತ್ತಾರೆ

**ಅಮೇರಿಕಾ ಪರಿಸರ ಆರೋಗ್ಯ ಸಮಿತಿ** ಪ್ರಕಾರ ಮನುಷ್ಯನು ಜೀವಿಸುವ, ಕೆಲಸ ಮಾಡುವ ಕ್ರಿಯಾನಿರತವಾಗಿರುವ ಸುತ್ತಲಿನ ಎಲ್ಲಾ ಅಂಶಗಳನ್ನು ಪರಿಸರವೆನ್ನುತ್ತಾರೆ.

ಪರಿಸರದಲ್ಲಿ ಒಂದು ಜೀವಿ ಅಥವಾ ಮಾನವನು ವಾಸಿಸುವ ಸ್ಥಳದ ಎಲ್ಲಾ ಜೈವಿಕ ಹಾಗೂ ಅಜೈವಿಕ ಅಂಶಗಳನ್ನು ಒಳಗೊಂಡಿದೆ, ಇವುಗಳನ್ನು ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಶಿಲಾಗೋಳ, ವಾಯುಗೋಳ, ಜಲಗೋಳ, ಜೀವಗೋಳ.

**ಶಿಲಾಗೋಳ:**

ಭೂಮಿಯು ಹೊರಭಾಗ ಅಥವಾ ಗಟ್ಟಿಯಾಗಿರುವ ಶಿಲಾ ಹೊರಕವಚವನ್ನು ಶಿಲಾಗೋಳ ಎನ್ನುತ್ತಾರೆ. ಉದಾ. ಮಣ್ಣು, ನೀರು, ಖನಿಜ, ಸಸ್ಯಗಳು, ಪ್ರಾಣಿಗಳು ಮುಂತಾದವುಗಳು

**ವಾಯುಗೋಳ:**

ಭೂಮಿಯನ್ನು ಸುತ್ತುವರಿದಿರುವ ಎಲ್ಲ ಪ್ರಕಾರದ ಅನಿಲಗಳ ಮಿಶ್ರಣವನ್ನು ವಾಯುಮಂಡಲ ಎನ್ನುತ್ತಾರೆ. ಉದಾ: ಇಂಗಾಲ ಡೈ ಆಕ್ಸೈಡ್, ಸಾರಜನಕ (ಸಸ್ಯಗಳ ಪೋಷಣೆ) ಆಮ್ಲಜನಕ (ಸಸ್ಯಗಳ ದ್ಯುತಿಸಂಶ್ಲೇಷಣ ಕ್ರೀಯೆಗೆ ಅಗತ್ಯವಾಗಿದೆ.

**ಜಲಗೋಳ:**

ಭೂಮಿ ಒಳಗೊಂಡಿರುವ ಎಲ್ಲ ಬಗೆಯ ಜಲರಾಶಿ, ಅಂತರ್ಜಲವನ್ನು ಹಾಗೂ ಘನರೂಪದಲ್ಲಿರುವ ಹಿಮವನ್ನು ಜಲಗೋಳವೆನ್ನುತ್ತಾರೆ.

**ಜೀವಗೋಳ:**

ಭೂಮಿಯಲ್ಲಿ ಜೀವಿಗಳು ಅಸ್ತಿತ್ವದಲ್ಲಿರುವ ಹಾಗೂ ಜೀವಿಸಿರುವ

ISBN 978-1-56646-725-4

ಭಾಗವನ್ನೇ ಜೀವಗೋಳ ಎನ್ನುತ್ತಾರೆ.

ಪರಿಸರ ಅಧ್ಯಯನವು ಹಲವಾರು ಪ್ರಾಕೃತಿಕ, ಸಾಮಾಜಿಕ ಮತ್ತು ಭೌತಿಕ ವಿಜ್ಞಾನಗಳ ಕ್ಷೇತ್ರದಲ್ಲಿ ಹಾಸುಹೊಕ್ಕಾಗಿದೆ.

ಇವರ ಕಾರ್ಯಶೀಲತೆ, ಆಹಾರ ಸರಪಳಿ ಮತ್ತು ಆಹಾರ ಜಾಲ, ವೈವಿಧ್ಯತೆ, ಪರಿಸರ ಮಾಲಿನ್ಯ ಮತ್ತು ಅದರ ಪರಿಹಾರೋಪಾಯಗಳು, ಪರಿಸರ ಮಾಲಿನ್ಯದ ಪರಿಣಾಮವಾಗಿ ಉಂಟಾಗಿರುವ ಸಾಮಾಜಿಕ ಸಮಸ್ಯೆಗಳ ಪರಿಶೀಲನೆ, ಜನಸಂಖ್ಯಾ ಬೆಳವಣಿಗೆಯಿಂದ ಪರಿಸರದ ಮೇಲೆ ಉಂಟಾಗಿರುವ ದುಷ್ಪರಿಣಾಮಗಳ ಪರಿಶೀಲನೆಯೇ ಪರಿಸರ ಅಧ್ಯಯನದ ವಸ್ತುವಾಗಿದೆ.

**ವ್ಯಾಪ್ತಿ:**

ಪರಿಸರ ಅಧ್ಯಯನ ವ್ಯಾಪ್ತಿಯು ಹೆಚ್ಚು ವಿಸ್ತಾರವಾಗಿದ್ದು ಈಗ ಅತ್ಯಂತ ಪ್ರಾಮುಖ್ಯತೆಯನ್ನು ಹೊಂದಿದೆ. ಪರಿಸರ ಅಧ್ಯಯನವು ಬಹು ವಿಷಯ ವಸ್ತು ಸ್ವರೂಪವನ್ನು ಒಳಗೊಂಡಿದೆ. ಭೌತಿಕ, ಜೈವಿಕ ಹಾಗೂ ಸಾಮಾಜಿಕ ವಿಷಯಗಳ ಅಂಶವಾಗಿದೆ. ಪರಿಸರ ಅಧ್ಯಯನ ಕ್ಷೇತ್ರವು ಅತ್ಯಂತ ವಿಸ್ತಾರವಾಗಿದ್ದು; ನಾಲ್ಕು ಗೋಳಗಳಿಗೆ ಸಂಬಂಧಪಟ್ಟ ಹಾಗೂ ಹಲವಾರು ಆಯಾಮಗಳಿಂದ ಕೂಡಿರುವ ಪರಿಸರದ ಭೌತಿಕ ಮತ್ತು ಜೈವಿಕ ಅಂಶಗಳಿಗೆ ಸಂಬಂಧಿಸಿದ ಮೂಲ ಅಧ್ಯಯನವಾಗಿದೆ.

ಪರಿಸರ ಅಧ್ಯಯನ ಪ್ರಾಮುಖ್ಯತೆಯನ್ನು ಕುರಿತು ಯಾವುದೇ ಭಿನ್ನಾಭಿಪ್ರಾಯಗಳು ಇರುವುದಿಲ್ಲ ಏಕೆಂದರೆ ಪ್ರಾಥಮಿಕ ಜ್ಞಾನ ಮಾನವನ ಜನಾಂಗಕ್ಕೆ ಅತ್ಯಗತ್ಯವಾಗಿದೆ, ಪರಿಸರ ಮಾಲಿನ್ಯದ ಸಮಸ್ಯೆಗಳು, ಅರಣ್ಯ ನಿರ್ಮೂಲನೆ, ಘನತ್ಯಾಜ್ಯವಸ್ತುಗಳ ನಿರ್ವಹಣೆ, ಪರಿಸರದ ಗುಣಮಟ್ಟದಲ್ಲಿ ಇಳಿಕೆ, ಭೂಮಿಯ ಉಷ್ಣಾಂಶದ ಹೆಚ್ಚಳ, ಓಝೋನ್ ಪದರವು ತೆಳುವಾಗುವಿಕೆ, ಜೀವ ವೈವಿಧ್ಯತೆಯ ನಾಶ  ಮುಂತಾದವುಗಳು ವಿಶ್ವವ್ಯಾಪಿ ಸಮಸ್ಯೆಯಾಗಿದೆ.

ಪರಿಸರ ಮಾಲಿನ್ಯತೆಯಿಂದ ಭೂ ವಾಯುಗುಣ ಬದಲಾವಣೆಯಾಗುತ್ತಿರುವುದು ಜಾಗತಿಕ ಸಮಸ್ಯೆಯಾಗಿದೆ, ಪರಿಸರದ ಗುಣಮಟ್ಟವು ಅತ್ಯಗತ್ಯವಾಗಿದೆ. ಪರಿಸರ ಗುಣಮಟ್ಟದ ವಿಶ್ಲೇಷಣೆ ಹಾಗೂ ಮಾನವನ ಮತ್ತು ಪರಿಸರದ ಸಂಬಂಧ ಅಧ್ಯಯನ. ಜೀವವೈವಿಧ್ಯತೆ, ಆಪತ್ತು ಹಾಗೂ ಸಂರಕ್ಷಣೆ ಕುರಿತು ಅಧ್ಯಯನ. ಮನುಷ್ಯನು ಪರಿಸರವನ್ನು ಸಂರಕ್ಷಿಸುವ ಮಹತ್ವ ತಿಳಿಸಿ ಅರಿವು ಮೂಡಿಸುವುದೇ ನನ್ನ ಈ ಅಧ್ಯಯನದ ಉದ್ದೇಶವಾಗಿದೆ.

ISBN 978-1-56646-725-4

**ಋಗ್ವೇದ ಪ್ರಕಾರ** – ಉಷಾದೇವಿಯು ಸೂರ್ಯೋದಯಕ್ಕೆ ಮೊದಲು ಮತ್ತು ಸೂರ್ಯಸ್ತದ ನಂತರವೂ ಇರುವಂತದ್ದು; ಪರ್ಜನ್ಯ ಸೂಕ್ತವೂ ಮೊಳೆಗೆರೆದು ಮಿಂಚುಗಳು ಗೊಂಚಲು ಗೊಂಚಲಾಗಿ ಸಂಚರಿಸಿ ವನಸ್ಪತಿಗಳು ಗರ್ಭಧರಿಸಿ, ಸುಖನೀಡಿರುವುದು, ವರುಣನು ವನಸ್ಪತಿಗಳಿಗೆ ನೀರೆರೆದು ಸ್ಫೂರ್ತಿಯಾಗಿರುವುದು. ಸೋಮನು ವನಸ್ಪತಿಗಳಿಂದ ತೆಗೆದ ರಸವೇ ಅಂಶು, ಸೋಮರಸವೆಂದು ಮರದ ಪಾತ್ರೆಯಲ್ಲಿ ಇರಿಸಿ ಅಂದರು, ಕುಂಟರು ಉಪಯೋಗ ಮಾಡುತ್ತಿದ್ದರು ಎಂದು ತಿಳಿದು ಬರುತ್ತದೆ.

**ಮಂಡೂಕಸೂಕ್ತದ ಪ್ರಕಾರ** – ಮಳೆಗಾಲದಲ್ಲಿ ಕಪ್ಪೆಗಳು ಧ್ವನಿಗೈಯುತ್ತಿರುವುದು; ದುಂಬಿಗಳು ವಿವಿಧ ಹೂವುಗಳಿಂದ ರಸವನ್ನು ಆಸ್ವಾದಿಸುತ್ತಿರುವುದು, ಶಬ್ಧ ಮಾಡುತ್ತಾ ಕಪ್ಪೆಗಳು ವಟರ್ ವಟರ್ ಎಂಬ ಧ್ವನಿಯೊಂದಿಗೆ, ಋಷಿಮುನಿಗಳು ಸೂಕ್ಷ್ಮಗ್ರಾಹಿಗಳಾಗಿ ಪರಿಸರವನ್ನು ಅವಲೋಕಿಸುತ್ತಿದ್ದುದು ಸಾಕ್ಷಿಯಾಗಿದೆ.

ಆಕಾಶವೂ ವನಸ್ಪತಿಗಳಿಗೆ, ವನಸ್ಪತಿಯು ಹಸುಗಳಿಗೆ, ದಿಕ್ಕುಗಳು ಕುದುರೆಗಳಿಗೆ, ಉಪದಿಕ್ಕುಗಳು ಸಮಸ್ತ ಪರಿಸರಕ್ಕೆ ಶಾಂತವಾಗಿದ್ದು; ಬೆಂಕಿ, ನೀರು ಮುಂತಾದವುಗಳು ಕಾಪಾಡಲಿ ಎಂದು ಪ್ರಾರ್ಥಿಸಲಾಗುತ್ತಿತ್ತು ಹಾಗೂ ದಶಶಾಂತಿಗಳಲ್ಲಿ ಒಂದು ಶಾಂತಿಮಂತ್ರಗಳನ್ನು ಸೇರಿ ಹೇಳುವುದಕ್ಕೆ ಪೃಥ್ವೀಶಾಂತಿ: ಎನ್ನುತ್ತಾರೆ.

**ಐತರೇಯ ಉಪನಿಷತ್ತುಗಳ ಪ್ರಕಾರ** – ಅಗ್ನಿಯು ಮಾತಿನ ಸ್ವರೂಪದಲ್ಲಿ ಬಾಯಿಯನ್ನು ಪ್ರವೇಶಿಸಿತು. ಗಾಳಿ ಮೂಗನ್ನು, ಸೂರ್ಯ ಕಣ್ಣನ್ನು, ದಿಕ್ಕು ದೇವತೆಗಳು ಕಿವಿಯನ್ನು, ಔಷಧಿ ಮತ್ತು ವನಸ್ಪತಿಗಳು ಕೂದಲಿನ ರೂಪದಲ್ಲಿ ಚರ್ಮವನ್ನು ಚಂದ್ರನು ಮನಸ್ಸು ಅಥವಾ ಹೃದಯವನ್ನು

**ಮುಂಡಕೋಪನಿಷತ್ತು ಪ್ರಕಾರ** – ಶರೀರ ಜೀವಾತ್ಮ ಪರಮಾತ್ಮವೆಂಬ ಎರಡು ಪಕ್ಷಿಗಳು ಶರೀರವೆಂಬ ಮರವನ್ನು ಆಶ್ರಯಿಸಿರುವುದು.

**ತೈತ್ತರೀಯ ಉಪನಿಷತ್ತು**–ವೃಕ್ಷ ಕೀರ್ತಿ ಪರ್ವತ, ಸೂರ್ಯನಲ್ಲಿ ಆತ್ಮತತ್ವ

**ಶ್ವೇತಾಶ್ವರ ಉಪನಿಷತ್ತು**–ಅಗ್ನಿ, ನೀರು, ಔಷಧ ಇತ್ಯಾಧಿ

**ಬೃಹದಾರಣ್ಯಕ ಉಪನಿಷತ್ತು**–ಮರದಎಲೆ(ಕೂದಲು),ತೊಗಟೆ(ಚರ್ಮ), ರಸ (ರಕ್ತ), ಶಕರ (ಮಾಂಸ).

ISBN 978-1-56646-725-4

ಛಾಂದೋಗ್ಯ ಉಪನಿಷತ್ತು-ಜೇನು ನೊಣಗಳು ಅಮೃತವನ್ನು ಸಂಗ್ರಹಿಸಲು, ಮರದ ರಸದೊಂದಿಗೆ ಹುಲಿ, ಸಿಂಹ, ತೋಳ, ಕಾಡುಹಂದಿ, ಕಾಡುಕೋಣ ತಾದಾತ್ಮ್ಯ ಹೊಂದಿರುವುದು ಪರಿಸರ ಚಿತ್ರಣವಾಗಿದೆ.

ರಾಮಾಯಣದಲ್ಲೂ ತಮಸಾ ನದಿ, ಕ್ರೌಂಚವಧೆ ಪ್ರಸಂಗ, ಬೇಡರವ, ಶೋಕರೂಪವು ಶ್ಲೋಕರೂಪದಲ್ಲಿ ಮೂಡಿ ಬಂದ ಪರಿಸರವನ್ನು ಪ್ರತಿ ಕಾಂಡಲ್ಲೂ ವರ್ಣಿಸಿರುವುದು ವಿಶೇಷವಾಗಿದೆ. ಅರಣ್ಯ ಕಾಂಡದಲ್ಲಿ ಚಿತ್ರಿತವಾಗಿರುವ ಪಂಚವಟಿಯ ರಮಣೀಯತೆ, ಪಂಚವಟಿ ವನಪ್ರದೇಶ, ಗೋದಾವರಿ ನದಿ, ಹೇಮಂತ ಋತುವಿನ ಸೊಬಗು, ಭೂಮಿ, ಪೈರು, ಪಚ್ಚೆಗಳಿಂದ ಕೂಡಿರುವಿಕೆ, ಯಜ್ಞದಿಂದ ಪಾಪ ಪರಿಹಾರ, ಸಮೃದ್ಧಿಯ ಹಾಲು, ರಾಜನ ವಿಜಯ ಯಾತ್ರೆ, ಮಂಜು ಮುಸುಕಿದ ಚಂದ್ರ ಕುರುಡು ಕನ್ನಡಿಯಂತಿದ್ದಾನೆ. ಗೋಧಿ, ಜವೆ, ಪೈರು, ಕ್ರೌಂಚ, ಸಾರಸ ಇಂಪಾಗಿರುವ ಸಂಗೀತ, ಸಸ್ಯ, ಬಂಗಾರ, ಸೂರ್ಯ, ಚಂದ್ರ, ಬಿಸಿಲು, ಹಿತಕರ, ಮರಳುಒದ್ದೆ, ಕಿನ್ನರ ಮಿಥುನ ಮುಂತಾದವುಗಳ ಪ್ರಕೃತಿಯ ಕಲ್ಪನೆಯು ತಿಳಿದು ಬರುತ್ತದೆ.

ಪ್ರಕೃತಿ ಮತ್ತು ಪರಿಸರವನ್ನು ಹೋಲಿಸುತ್ತಾ "ಶಮೀ ಶಮಯತೇ ಪಾಪಂ" ಎಂದರೆ ಶಮೀ ವೃಕ್ಷವು ಪಾಪವನ್ನು ಪರಿಹರಿಸಿ, ಶತ್ರುಗಳನ್ನು ನಾಶಗೊಳಿಸಿ ವಿಜಯಶಾಲಿಯನ್ನಾಗಿ ಮಾಡುತ್ತದೆ. ಶಾಂತಿ ಪರ್ವದ 157ನೇ ಅಧ್ಯಾಯದಲ್ಲಿ ಶಾಲ್ಮಲೀ ವೃಕ್ಷದ ನಿದರ್ಶನದಿಂದ ಭಿಷ್ಮಾಚಾರ್ಯರು ಧರ್ಮರಾಜನಿಗೆ " ಬಲಿಷ್ಠರೊಡನೆ ವೈರತ್ವವನ್ನು ಕಟ್ಟಿಕೊಳ್ಳಬಾರದು" ಎಂಬ ಉಪದೇಶವು, ಸಾಮರಸ್ಯದಿಂದ ಮಾತ್ರ ಹೊಂದಾಣಿಕೆ ಸಾಧ್ಯವೆಂಬುದು ಸಾರ್ವಕಾಲಿಕ ಸತ್ಯವಾಗಿದೆ. ವಿಶ್ವವೇ ದೇವರು , ಆಕಾಶ, ನಕ್ಷತ್ರಗಳು, ಗ್ರಹಗಳು, ಋತುಗಳು, ಮಾಸ, ಪಕ್ಷ, ಸಂವತ್ಸರ, ಹಾವುಗಳು, ನದಿಗಳು, ಮರಗಿಡಗಳು, ದಿಕ್ಕುಗಳು, ಉಪ ದಿಕ್ಕುಗಳು ಎಂದೆಂದಿಗೂ ಕಾಪಾಡಲಿ ಎಂಬ ಶಾಂತಿಯುತ ಪ್ರಾರ್ಥನಾ ರೂಪದ ಪರಿಸರ ಚಿತ್ರಣವು ಮೂಡಿಬರುತ್ತದೆ.

**ಕಾಳಿದಾಸನ ಪ್ರಕಾರ-**

ಕಾಳಿದಾಸನ ಸೂಕ್ಷ್ಮ ದೃಷ್ಟಿಯಿಂದ ಪ್ರಕೃತಿಯಲ್ಲಿರುವ ಸೂಕ್ಷ್ಮ ರಹಸ್ಯಗಳನ್ನು ಸಾವಧಾನವಾಗಿ, ಹೃದಯಂಗಮವಾಗಿ, ಪ್ರಕೃತಿಯು ನಮ್ಮ ಕಣ್ಣಿನ ಮುಂದೆಯೇ ಇರುವಂತೆ ರಚಿಸಿದ್ದಾನೆ. ಬಾಹ್ಯ ಪ್ರಕೃತಿಯ ಚಿತ್ರವನ್ನು ಸೂಕ್ಷ್ಮವಾಗಿ ನಿರೀಕ್ಷಿಸುವುದು

ಹಾಗೂ ಗ್ರಹಿಸುವುದು ಮಹತ್ತರವಾದ ವೈಶಿಷ್ಟ್ಯವೇ ಕಾಳಿದಾಸನದು.

ಕಾಳಿದಾಸನ ಕೃತಿಗಳಲ್ಲಿ ಪ್ರಕೃತಿಯು ಒಂದು ಆರಾಧ್ಯ ದೈವವೆಂದು; ಭಾರತೀಯರಲ್ಲಿ ಪೂಜ್ಯನೀಯ ಭಾವನೆಗಳಿಂದ ಕೂಡಿರುವುದನ್ನು, ನಿರೀಕ್ಷಣ ಶಕ್ತಿಯನ್ನು ಹೆಚ್ಚು ಸೂಕ್ಷ್ಮವಾಗಿಯೂ ಹಾಗೂ ವಿಶಾಲವಾಗಿಯೂ ವರ್ಣಿಸಿರುವುದನ್ನು ಇಂದಿಗೂ ಸಹ ನೋಡಬಹುದು.

**ಶೀಕರ ವ್ಯತಿಕರಂ ಮರೀಚಿಭಿರ್ದೂರಯತ್ಯವನತೇ ವಿವಸ್ವತಿ ।**

**ಇಂದ್ರಚಾಪ ಪರಿವೇಷ ಶೂನ್ಯತಾಂ ನಿರ್ಝರಾಸ್ತವ ಪಿತುರ್ವ್ರಜಂತ್ಯಮಿ ॥ (ಕುಮಾರ.ಸಂ–8–31)**

ಝರಿಗಳಲ್ಲಿ ಕಾಮನ ಬಿಲ್ಲು ಕಾಣದಿದ್ದರೂ ಸಹ, ಕೊಳಗಳಲ್ಲಿನ ನೀರಿನಲ್ಲಿ ಮುಳುಗುತ್ತಿರುವ ಸೂರ್ಯನ ಕಾಂತಿಯು ಬೀಳುವುದರಿಂದ ಒಂದು ಚಿನ್ನದ ಹೂವು ನೀರಿನಲ್ಲಿದೆಯೇ ಎಂಬಂತೆ ಭಾವನೆಗಳಿವೆ.

**ಪಶ್ಚಪಶ್ಚಿಮದಿಗಂತ ಲಂಬನಾ ನಿರ್ಮಿತಂ ಮಿತ ಕಥೇ ವಿವಸ್ವತಾ ।**

**ಲಬ್ಧಯಾ ಪ್ರತಿಮಯಾ ಸರೋಂಭಸಾಂ ತಾಪನೀಯಮಿವ ಸೇತು ಬಂಧನಮ್ ॥(ಕುಮಾರ.ಸಂ.8–34)**

ಪ್ರಕೃತಿ ಕಾಂತಿಯನ್ನು ಮುಗ್ಧದೃಷ್ಟಿಯಿಂದ ಸಮಸ್ತವನ್ನೂ ಮರೆಯುವ ಮಾತುಗಳಾಗಿರುತ್ತವೆ, ಇಲ್ಲಿ ಹಿಮಾಲಯದ ವರ್ಣನೆಯು ಸುಂದರವಾಗಿದೆ ಹಾಗೂ ವೈಶಿಷ್ಟ್ಯಗಳಿವೆ.

ಕೆಲವೆಡೆ ಮಾನವನ ಭಾವನೆಗಳನ್ನೂ ಮತ್ತು ವ್ಯಾಪಾರಗಳನ್ನು ಸುಂದರವಾಗಿ ಪ್ರಕೃತಿಯ ಮೇಲೆ ಆರೋಪಿಸುತ್ತಾನೆ, ಮೈತ್ರಿಯ ಕೆಲವು ಕಡೆ ಪ್ರಕೃತಿ ಮತ್ತು ಮಾನವರ ಮಧ್ಯದಲ್ಲಿ ಪರಸ್ಪರವಾದ ಗಾಢ ಮೈತ್ರಿ, ಸಹಾಜವಾದ ಸಹಾನುಭೂತಿ, ರಾಗಾತ್ಮಿಕವಾದ ವೃತ್ತಿಗಳನ್ನು ಕಲ್ಪನೆ ಮಾಡಿದರೆ, ಮತ್ತೆ ಕೆಲವು ಕಡೆ ಪ್ರಕೃತಿಯನ್ನು ಈಶ್ವರನ ಲಲಿತವಾದ ಲೀಲೆಗಳು ನಿಕೇತನವೆಂದೂ ಕಲ್ಪನೆ ಮಾಡಿ ಆನಂದಿತನಾಗುತ್ತಾನೆ, ಕವಿಯ ದೃಷ್ಟಿಯಲ್ಲಿ ಪ್ರಕೃತಿಯ ಸೌಮ್ಯರೂಪ, ಮಾಧುರ್ಯಮಯವಾದ ಪ್ರವೃತ್ತಿ ಮತ್ತು ಸ್ನಿಗ್ಧ ಸೌಂದರ್ಯದ ಮೇಲೆ ಹರಿದಾಡುತ್ತಿದೆ.

ಪ್ರಕೃತಿಯೊಂದಿಗೆ ಬೆರೆತಿರುವ ಮಾನವನು ರಸಜೀವನವನ್ನೂ ಕಳೆಯುತ್ತಿದ್ದನು ಹಾಗೂ ದಿವ್ಯವಾದ ಆನಂದವನ್ನೂ ಅನುಭವಿಸುತ್ತಿದ್ದಾನೆ. ತಪೋವನದ ವಾತಾವರಣವು ಆಧ್ಯಾತ್ಮಿಕ ಪ್ರವೃತ್ತಿಯನ್ನು ಉದಯಿಸುವಂತೆ

ISBN 978-1-56646-725-4

ಮಾಡುತಿತ್ತು, ಕಲಕಲ ನಿನಾದವನ್ನೂ ಮಾಡುವ ನದಿಯ ದಡದ ಮೇಲೆ ತಾಪಸಿಗಳು ವಾಸಮಾಡುತ್ತಿದ್ದರು, ಅಲ್ಲಿನ ಅರಣ್ಯಗಳಲ್ಲಿ ಪ್ರಾಣಿಗಳು ತಮ್ಮ ಸ್ವಾಭಾವಿಕವಾದ ವೈರತ್ವವನ್ನೂ ತ್ಯಜಿಸಿ ಪರಸ್ಪರ ಪ್ರೀತಿಯಿಂದ ಇರುತ್ತಿದ್ದವು. ಜಿಂಕೆ ಮರಿಗಳು ತಮ್ಮ ತಾಯಿಯ ಸಹವಾಸವನ್ನು ಬಿಟ್ಟು ಋಷಿಗಳ ಸಹವಾಸದಲ್ಲಿ ಕಳೆಯುತ್ತಿದ್ದವು. ಅವುಗಳಿಗೆ ಹುಲ್ಲನ್ನು ತಿನ್ನುವಾಗ ಉಂಟಾದ ಘಾಯವನ್ನು ಋಷಿಗಳು ಇಂಗುದೀ ತೈಲವನ್ನು ಹಚ್ಚುವುದರ ಮೂಲಕ ವಾಸಿಮಾಡುತ್ತಿದ್ದರು.

ಆಶ್ರಮಗಳಲ್ಲಿ ನಿರಂತರವಾಗಿ ಅಗ್ನಿಹೋತ್ರ ಮಾಡುತ್ತಿದ್ದುದರಿಂದ, ವೃಕ್ಷಗಳು ಹೊಗೆಯಿಂದ ಆವೃತ್ತವಾಗಿ ವಿಚಿತ್ರ ಸೌಂದರ್ಯವನ್ನುಂಟು ಮಾಡುತ್ತಿದ್ದವು. ಜಿಂಕೆಗಳ ವಿಷಯದಲ್ಲಿ ಋಷಿಪತ್ನಿಯರ ಪ್ರೀತಿಯು ಎಷ್ಟು ಸಹಜ ಹಾಗೂ ಸ್ವಾಭಾವಿಕವಾಗಿದೆಯೆಂದರೆ,

**ಸೇಕಾಂತೇ ಮುನಿಕನ್ಯಾಭಿಸ್ತತ್ ಕ್ಷಣೋಜ್ಝತವೃಕ್ಷಕಮ್ ।**

**ವಿಶ್ವಾಸಾಯ ವಿಹುಗಾನಾಮಾಲವಾಲಾಂಬುಪಾಯಿನಾಮ್ ॥**

**(ರಘುವಂಶ–1–51–52)**

ಮುನಿ ಕನ್ನಿಕೆಯರು ಗಿಡಗಳಿಗೆ ಸ್ವಯಂ ನೀರು ಹಾಕುತ್ತಿದ್ದರು. ಮರಗಳ ಮೇಲೆ ಕುಳಿತಿರುವ ಪಕ್ಷಿಗಳು ಪಾತ್ರೆಯಲ್ಲಿರುವ ನೀರನ್ನು ಕುಡಿಯಲು ಅಪೇಕ್ಷಿಸುತ್ತಿದ್ದವು. ಆದುದರಿಂದ ಅವುಗಳಲ್ಲಿ ವಿಶ್ವಾಸವನ್ನುಂಟು ಮಾಡುವುದಕ್ಕಾಗಿ, ಮುನಿಕನ್ನಿಕೆಯರು ಆ ಗಿಡಗಳನ್ನು ಬೆಳೆಸುತ್ತಿದ್ದರು, ಋಷಿ–ಮುನಿಗಳ ಆಶ್ರಮದ ಸೌಂದರ್ಯವು ಸ್ವಾಭಾವಿಕವಾದುದು. ಗ್ರೀಷ್ಮಋತುವಿನ ನಂತರ ಋಷಿಗಳು ನೀವಾರ ಧಾನ್ಯವನ್ನು ತಂದು ಅಂಗಳದಲ್ಲಿ ಶೇಖರಿಸಿದ್ದರು. ಜಿಂಕೆಗಳು ಇಲ್ಲಿ ಕುಳಿತುಕೊಂಡು ಮೆಲಕು ಹಾಕುತ್ತಿದ್ದವು, ಇಂತಹ ಸುಂದರವಾದ ವಾತಾವರಣದಲ್ಲಿ ಸಹಜವಾದ ಸ್ನೇಹವು ಉದಯಿಸುತ್ತದೆ.

**ಬಾಣಭಟ್ಟನ ಕಾವ್ಯಗಳಲ್ಲಿ:–**

ಬಾಣಭಟ್ಟನು ತನ್ನ ಕಾದಂಬರಿಯಲ್ಲಿ ವರ್ಣಿಸದಿರುವ ಪ್ರಕೃತಿಯ ವರ್ಣನೆಯು ವಿಚಾರಗಳಿಲ್ಲ, ಬಾಣನ ಶೈಲಿಯು ಅದ್ಭುತವಾಗಿದ್ದು, ಸಮಾಸಭೂಯಿಷ್ಠವಾದ ದೀರ್ಘವಾಕ್ಯಗಳು ಸಾಗರದ ಘನ– ಗಂಭೀರ– ಹೆದ್ದೆರೆಗಳಂತೆ ಗರ್ಜಿಸುತ್ತಾ ಪುಂಖಾನುಪುಂಖವಾಗಿ ಬಂದರೆ ಸಮಾಸ ರಹಿತವಾಗಿ ಪ್ರಸಾದಗುಣಗಳಿಂದ ಕೂಡಿದ ಚಿಕ್ಕ ವಾಕ್ಯಗಳು ಕಾಸಾರದ ಕಿರುಕಲ್ಲೋಲಗಳಂತೆ ಮಂಜುಳನಾದ ಮೀಟುತ್ತಾ ಗುಂಪುಗುಂಪಾಗಿ ಬರುತ್ತವೆ.

ISBN 978-1-56646-725-4

ಸಂಸ್ಕೃತ ಸಾಹಿತ್ಯದಲ್ಲಿ ಕೆಲವು ಕವಿಗಳು ಪ್ರಕೃತಿಯ ರೂಪವನ್ನು ಚಿತ್ರಿಸುವುದರಲ್ಲಿ ಚತುರರಾದರೆ ಮತ್ತೆ ಕೆಲವರು ಪ್ರಕೃತಿಯ ಭಯಾನಕ ಹಾಗೂ ರೋಮಾಂಚನಕಾರಿಯಾದ ಸೌಂದರ್ಯದ ರೂಪವನ್ನು ಚಿತ್ರಿಸುವುದರಲ್ಲಿ ಅಗ್ರಗಣ್ಯರಾಗಿದ್ದಾರೆ; ಆದರೆ ಪ್ರಕೃತಿಯ ಉಭಯಪ್ರಕಾರಗಳಾದ ಮಧುರ, ಭಯಾನಕ ಮತ್ತು ಆಶ್ಚರ್ಯಕರವಾದ ದೃಶ್ಯಗಳನ್ನು ವರ್ಣಿಸುವುದರಲ್ಲಿ ಸಮಾನವಾಗಿ ಸಾಫಲ್ಯವನ್ನು ಹೊಂದಿರುವುದೇ ಬಾಣನ ವೈಶಿಷ್ಟ್ಯ ಈ ದೃಶ್ಯಗಳ ಸ್ವರೂಪವನ್ನು ಹೃದಯಂಗಮವನ್ನಾಗಿ ಉಪಮಾ, ಉತ್ಪ್ರೇಕ್ಷಾ, ವಿರೋಧಾಭಾಸ ಮತ್ತು ಪರಿಸಂಖ್ಯಾ ಮುಂತಾದ ಅಲಂಕಾರಗಳ ಪ್ರಯೋಗದಿಂದ ವರ್ಣನೆಯಾದ ವಿಷಯವು ಓದುವವರಿಗೆ ಅಭಿವ್ಯಕ್ತವಾಗಲಿ ಎಂಬುದು ಕವಿಯ ಆಶಯವಾಗಿದೆ.

ಹಲವಾರು ಪಾತ್ರಚಿತ್ರಣಗಳೊಂದಿಗೆ ಭೌಗೋಳಿಕವಾಗಿ ಮತ್ತು ಪ್ರಾಕೃತಿಕವಾಗಿರುವ ಪರಿವರ್ತನೆಗಳ ವರ್ಣನೆಯನ್ನು ನೋಡಿದರೆ, ನಾವು ಪದಗಳಲ್ಲಿ ಹೇಳಲು ಅಸಾಧ್ಯವೆಂದು ತಿಳಿಯಬೇಕಾಗಿದೆ. ವರ್ಣನೆಮಾಡಿರುವ ಅಲಂಕಾರಗಳ ಮಧುರವು ಝುಂಕಾರವು ಕೇಳುವವರಿಗೆ ಅತ್ಯಂತ ಸಂತೋಷವನ್ನು ನೀಡುತ್ತದೆ ಎಂಬುದು ಎಲ್ಲರಿಗೂ ತಿಳಿದಿರುತ್ತದೆ.

ಸಂಸ್ಕೃತ ಗದ್ಯ ಸಾಹಿತ್ಯಕ್ಕೆ ಮುಕುಟಪ್ರಾಯವಾಗಿರುವ ಕಾದಂಬರಿಯಲ್ಲಿನ ವರ್ಣನೆಗಳಾದ ಸೂರ್ಯಚಂದ್ರೋದಯ, ಪಶುಪಕ್ಷಿಗಳ ಹಾಗೂ ಅಚ್ಛೋದ ಸರೋವರ ಮತ್ತು ವಿಂಧ್ಯಾಟವೀಯಗಳ ಬಗ್ಗೆ ಸೊಗಸಾದ ಅದ್ಭುತ ರಮಣೀಯತೆಯೊಂದಿಗೆ ಮನೋಹರವಾಗಿ ವರ್ಣಿಸಿರುವ ಸುಂದರ ಮಾಯಾಲೋಕವೇ ಈ ಕಾದಂಬರೀಯಾಗಿದ್ದು, ಈ ಶ್ರೇಷ್ಠ ಕೃತಿಯನ್ನು ರಚಿಸಿರುವ ಮಹಾಕವಿ ಬಾಣಭಟ್ಟನ ಕೀರ್ತಿಯನ್ನು ಅಜರಾಮಗೊಳಿಸಿದೆ.

**ಪಶುಪಕ್ಷಿಗಳ ಮತ್ತು ಅಚ್ಛೋದ ಸರೋವರದ ವರ್ಣನೆ:-**

**'ವನಮಹಿಷಿರೋಮಂಥಫೇನಬಿಂದುವಾಹಿನಿ ಚಲಿತಪಲ್ಲವಲತಾ ಲಾಸ್ಯೋಪದೇಶ ವ್ಯಸನಿನಿ ವಿಘಟವಮಾನ, ಕಮಲ ಖಂಡಮಧುಶೀಕರಾಸಾರವರ್ಷಿಣಿ.........................'** ಕಾದಂಬರಿ ಕಥಾಮುಖದಲ್ಲಿ ವನಮಹಿಷಿಯ ಉಲ್ಲೇಖ ಹಾಗೂ ಸೂರ್ಯೋದಯವನ್ನು ವರ್ಣಿಸುವ ಸಮಯದಲ್ಲಿ ನವಮಹಿಷಿಯ ಮುಖದಿಂದ ಬರುತ್ತಿರುವ ನೊರೆಯನ್ನು ಈ ರೀತಿಯಾಗಿ ತಿಳಿಸಲಾಗಿದೆ ಹಾಗೂ ಸಿಂಹಗಳ, ಆನೆಗಳ ಮತ್ತು ಕತ್ತೆಗಳ

ISBN 978-1-56646-725-4

ಉಲ್ಲೇಖವನ್ನೂ ಕೂಡ ನೋಡಬಹುದಾಗಿದೆ.

'ಕರ್ಣೇಸುತಕಥೇವ ಸನ್ನಿಹಿತವಿಪುಲಾಚಲಾ ಶಶೋಪಗತಾ ಚ..................' ವಿಂಧ್ಯಾಟವೀಯ ವರ್ಣನೆಯನ್ನು ವರ್ಣಿಸುವಾಗ ಗಿಣಿಗಳ, ಆನೆಗಳ ಉಲ್ಲೇಖವಿದೆ, ವಿಂಧ್ಯಾಟವಿಯ ಸ್ವರೂಪವನ್ನು ಬಹು ಸಫಲವಾಗಿ ಬಾಣನು ಚಿತ್ರಿಸಿರುವುದು ವಾಸ್ತವವಾಗಿಯೂ ಆಶ್ಚರ್ಯಜನಕವಾಗಿದೆ. ವಿಂಧ್ಯಾಟವಿಯು ಗಿರಿತನಯಳಾದ ಪಾರ್ವತಿಯಂತೆ ಸ್ಥಾಣುವಿನಿಂದ ಕೂಡಿ ಮತ್ತು ಮೃಗಪತಿಯಿಂದ ಸೇವಿತವಾಗಿದೆ.

'ಇತೋ ವನಗಜಕುಲಮ್, ಇತೋಬವನವರಾಹಯೂಥಮ್, ಇತೋ ವನಮಹಿಷವೃಂದವಮ್.......' ಎಂಬ ಪದಪುಂಜಗಳಲ್ಲಿ ಭಾಣಭಟ್ಟನು ಸೂರ್ಯೋದಯದ ವರ್ಣನೆ ಹಾಗೂ ಕಾಡಾನೆ, ಕಾಡುಹಂದಿ, ಸಿಂಹಗಳ ಮುಂತಾದ ಪ್ರಾಣಿಗಳ ವರ್ಣನೆಯನ್ನು ನೋಡಬಹುದಾಗಿದೆ.

'ವಿಂಯತಿ ವಿಸಾರಿಣೀ ಶಷ್ಪವೀಥೀಮಿವಾರಚಯಂತ: ಸೇಂದ್ರಾಯುಧಮಿವಾಂತರಿಕ್ಷ ಮಾದಧಾನಾ ವಿರಚಯಂತಿ ಸ್ಮ ಶುಕಶಕುನಯ:' ಶಾಲ್ಮಲೀರುವರ್ಣನೆ ಹಾಗೂ ಗಿಳಿಗಳ ಮತ್ತು ಇತರೆ ಪಕ್ಷಿಗಳ ಬಗ್ಗೆ ಚಿತ್ರಿಸಲಾಗಿದೆ. ಈ ಹಕ್ಕಿಗಳಾದರೋ ಆಕಾಶದಲ್ಲಿ ವಿಹಾರ ಮಾಡುತ್ತಾ ವಿಭಿನ್ನವಾದ ಆಕೃತಿಗಳನ್ನು ರಚಿಸಿದರು.

'ಚಂಪಕಪರಾಗಪುಂಜಪಿಂಜಲಜಗ್ಧಪಿಪ್ಪಲೀಫಲೈ: ............ಪಾಲೀಪಾತಿತ ಕುಸುಮೈ:'

'ಕುಸುಮ ರಜೋರಾಶಿಸಾರಸಾರಿಕಾಶಿತ ಶಿಖರೈ: ಶುಕಶತಮುಖನಖಶಿಖರ......'।

ಅಚ್ಛೋದ ಸರೋವರದ ವರ್ಣನೆಯೂ ಸಹ ಕವಿಯ ಸೂಕ್ಷ್ಮದೃಷ್ಟಿಗೆ ನಿದರ್ಶನವಾಗಿದೆ. ಸರೋವರದ ದಡದಮೇಲೆ ಬೆಳೆದಿರುವ ಕದಂಬ ವೃಕ್ಷಗಳಿಂದ ಕಪಿಗಳು ಹಾರುವ ವರ್ಣನೆಯು ಬಹು ಸ್ವಾಭಾವಿಕವಾಗಿದೆ. ಸರೋವರದ ಸ್ವಚ್ಛತೆಯನ್ನು ಪ್ರದರ್ಶಿಸುವುದಕ್ಕಾಗಿ ಬಾಣನು ಅನೇಕ ಅಲಂಕಾರಗಳನ್ನು ಉಪಯೋಗಿಸಿದ್ದಾನೆ.

'ಅದ್ಯ ಪರಿಸಮಾಪ್ತಮಾಕ್ಷಣ..............................ಪ್ರತ್ಯಕ್ಷೀಕೃತಾ ಪ್ರೀತಿಜನನಾನಾಂ ಪರಿ ಸಮಾಪ್ತಿ: ವಿಲೋಕಿತಾ ದರ್ಶನೀಯಾನಾಮವಸಾನಭೂಮಿ:' ಇದಕ್ಕಿಂತ ಬೇರೆ ಸುಂದರವಾದ ಪದಗಳ ವಿನ್ಯಾಸವನ್ನು ಎಲ್ಲಿಯೂ ಸಹ ನೋಡಲು ಸಾಧ್ಯವಿಲ್ಲ. ಪ್ರಕೃತಿಯ ವಿಷಯದಲ್ಲಿ ಬಾಣನ ಪಕ್ಷಪಾತವೂ, ಮಾನವ

ISBN 978-1-56646-725-4

ಸ್ವಭಾವವನ್ನು ಸೂಕ್ಷ್ಮವಾಗಿ ತೋರಿಸುವ ಆತನ ಶಕ್ತಿಯೂ ಈ ಕಾದಂಬರಿಯಲ್ಲಿ ವಿಶೇಷವಾಗಿ ಕಂಡುಬರುತ್ತದೆ.

**ಸೂರ್ಯೋಚಂದ್ರೋದಯದ ವರ್ಣನೆ:-**

ಬಾಣಭಟ್ಟನ ವರ್ಣನ ಶೈಲಿಯನ್ನು ನಾವು ಗಮನಿಸಲೇಬೇಕು. ನಮ್ಮ ದೇಶದಲ್ಲಿ ಸಂಸ್ಕೃತ ಸಾಹಿತ್ಯಕ್ಷೇತ್ರದ ಬಗ್ಗೆ ವರ್ಣನೆ ಮಾಡುವವರ ಸಂಖ್ಯೆ ಸಾಗರದಂತಿದ್ದು; ವರ್ಣನೆಗೆ ಹೊರಟರೆ ಒಬ್ಬರಿಗಿಂತ ಒಬ್ಬರನ್ನು ಮೀರಿಸುವವರೇ ಇದ್ದಾರೆ. ಆದರೆ ಬಾಣಭಟ್ಟನಂತಹವರು **'ನ ಭೂತೋ ನ ಭವಿಷ್ಯತಿ'** ಬಾಣಭಟ್ಟನ ವರ್ಣನಚಿತ್ರ ಶಾಲೆಯೆಂಬ ಲತಾಕುಂಜರದಲ್ಲಿ ವರ್ಣರಂಜಿತವಾಗಿರುವ ಅನೇಕ ಪುಷ್ಪಗಳ ಮತ್ತು ಪ್ರಕೃತಿ ವರ್ಣನೆಗಳಲ್ಲಿ ಬಾಣಭಟ್ಟನ ಸೂಕ್ಷ್ಮದೃಷ್ಟಿಯನ್ನು ನಾವು ಖಂಡಿತ ಮೆಚ್ಚುವಂತಹದ್ದಾಗಿದೆ.

**'ಏಕದಾ ತು ನಾತಿದೂರೋದಿತೇ ನವಿಲನ............................ಭಗವತಿ ಮರೀಚಮಾಲಿನಿ'** ಎಂಬ ಮಾತಿನ ಮುಖಾಂತರ ಭಾಣಭಟ್ಟನು ಸೂರ್ಯೋದಯದ ಸನ್ನಿವೇಶವನ್ನು ತರುತ್ತಾನೆ.

**'ಅವಶ್ಯಯಶೀಕರಣೇ ಲುಲಿತಕಮಲವನೇ ರತಿಭಿನ್ನಶಬರಸೀಮಂತಿನೀ ಸ್ವೇದಜನಕಣಾಪಹಾರೀಣಿ ವನಮಹಿಷಿರೋಮಂಥಪೇನಬಿಂದುವಾಹಿನಿ...............'**

ಈ ಮೇಲ್ಕಂಡಂತೆ ಸೂರ್ಯೋದಯದ ವರ್ಣನೆಯನ್ನು ಕಥಾಮುಖದಲ್ಲಿ ಸವಿಸ್ತಾರವಾಗಿ ಬಾಣಭಟ್ಟನು ತಿಳಿಸಿರುತ್ತಾನೆ.

**'ಸಶೇಷನಿದ್ರಾಜಿಹ್ಯತಾರಂ ಚಕ್ಷುರುನ್ಮೀಲಯುತ್ಸು ಶನ್ಯೆ ಶನ್ಯೆರುಷರಶಯ್ಯಾಧೂಸರ...............'** ಪ್ರಭಾತವರ್ಣನೆಯನ್ನು ಕಥಾಮುಖದಲ್ಲಿ ಉಲ್ಲೇಖಿಸಿರುತ್ತಾನೆ.

ಚಂದ್ರೋದಯವಾದಾಗ ಕಮಲದ ಹೂಗಳು ವಿಕಾಸಗೊಳ್ಳುವ ಹಾಗೇ ಚಂದ್ರಾಪೀಡನು ಗುರುಕುಲದಿಂದ ವಿದ್ಯಾಭ್ಯಾಸವನ್ನು ಮುಗಿಸಿ ಆಗಮಿಸುತ್ತಿರುವ ಚಂದ್ರಪೀಡನನ್ನು ನೋಡಲು ಪುರಜನರೆಲ್ಲರೂ ತಮ್ಮ ಕೆಲಸವನ್ನು ಬಿಟ್ಟು ಪ್ರಸನ್ನರಾಗಿ ರಾಜಪಥದ ಕಡೆಗೆ ನೆಟ್ಟ ದೃಷ್ಟಿಯುಳ್ಳವರಾಗಿದ್ದರೆಂದು ಬಾಣಭಟ್ಟನು ವರ್ಣಿಸುತ್ತಾನೆ.

**'ಕ್ರಮೇಣ ಚ ತಂ ......ಕೈಲಾಸಶಶಿಮಣಿಶಿಲಾನಾಂ । ಚಂದ್ರಕರ ಇವ ವಿಪ್ಲುತಕಮಲ ವನಶೋಭೇ.... ..।**

ISBN 978-1-56646-725-4

ಸೂರ್ಯೋದಯ ಮತ್ತು ಚಂದ್ರೋದಯ, ಮುಂತಾದ ಪ್ರಕೃತಿಯ ನಾನಾ ದೃಶ್ಯಗಳ ವರ್ಣನೆಯನ್ನು ಸಹ ಬಹು ಸಹೃದಯತೆಯಿಂದಲೂ ಮತ್ತು ಯಥಾರ್ಥವಾಗಿಯೂ ಬಾಣಭಟ್ಟನು ಮಾಡಿರುತ್ತಾನೆ.

**ವಿಂಧ್ಯಾಟವೀಯ ಮತ್ತು ಅರಣ್ಯದ ವರ್ಣನೆ:-**

ಬಾಣಭಟ್ಟನ ವಿಸ್ಮಯಕಾರಿಯಾದ ವರ್ಣನ ಸಾಮರ್ಥ್ಯವನ್ನು ಹೊಂದಿರುವ ವ್ಯಕ್ತಿಗೆ ವರ್ಣಿಸುವ ವಸ್ತುವು ಎದುರಿಗೆ ಇರಬೇಕೆಂಬ ನಿಯಮಗಳಿಲ್ಲ. ಅಸುಂದರವಾಗಿರುವ ವಸ್ತುಗಳನ್ನು ತಮ್ಮ ವರ್ಣನಕೌಶಲ್ಯಗಳಿಂದ ಪ್ರತಿಪಾದಿಸಬಲ್ಲರು. ವಸಂತಕಾಲದ ವರ್ಣನೆಯನ್ನು ಹೇಗೆ ಮಾಡುವರೋ, ಕ್ಷಾಮದ ವರ್ಣನೆಯನ್ನೂ ಹಾಗೆಯೇ ಮಾಡಿ ಸಹೃದಯರನ್ನು ಆಕರ್ಷಿಸಬಲ್ಲರು.

**'ಅಸ್ತಿ ಪೂರ್ವಾಪರ ಜಲನಿಧಿ ವೇಲಾವಲಗ್ನಾ ಮಧ್ಯದೇಶಾಲಂಕಾರಭೂತ ಮೇಖಲೇವ ಭುವ: '।**

**ಶಿಖರದೇಶಲಗ್ನಮುದ್ವಹದ್ಭಿ:........... ...ದೃಶ್ಯಮಾನ ಮರಿಚಪಲ್ಲವಾ ।**

ದೇಶದ ಮಧ್ಯದಲ್ಲಿರುವ ಭಾರತ ಮೇಖಲೆಯಂತೆ ಸಾಗರದವರೆಗೂ ವಿಸ್ತರಿಸಿರುವ ಗಹನವಾದ ವಿಂಧ್ಯಾರಣ್ಯವಿದೆ. ಇಲ್ಲಿ ವನಗಜಗಳ ಮದಜಲದಿಂದ ಸಿಕ್ತವಾಗಿದ್ದು, ಅಲ್ಲಿರುವ ಪುಷ್ಪಗಳು ಆಕಾಶದಲ್ಲಿರುವ ಚಂದ್ರನಂತೆ ಶೋಭಾಯಮಾನವಾಗಿದ್ದವು.

**'ಅಪರಿಮಿತ ಬಹಲಪತ್ರಸಂಚಯಾಪಿ ಸಪ್ತವರ್ಣಭೂಷಿತಾ, ಕ್ರೂರಸತ್ವಾಪಿ ಮುನಿಜನ ಸೇವಿತಾ, ಪುಷ್ಪವತ್ಯಪಿ ಪವಿತ್ರಾ ವಿಂಧ್ಯಾಟವೀ ನಾಮ'**

ಬಾಣಭಟ್ಟನು ತನ್ನ ಕಾದಂಬರಿಯ ಕಥಾಮುಖದ ಭಾಗದಲ್ಲಿ ಕಲ್ಪನೆಯ ಮತ್ತು ರಮಣೀಯತೆಯನ್ನು ವಿಂಧ್ಯಾಟವೀಯ ಮತ್ತು ಶಾಲ್ಮಲೀ ವೃಕ್ಷದ ವರ್ಣನೆಗಳನ್ನು ಮಾಡಿದ್ದಾನೆ. ಪ್ರಕೃತಿಸೌಂದರ್ಯವನ್ನು ತನ್ನ ಕೌಶಲ್ಯದಿಂದ ವರ್ಣಿಸಿ ಹಾಗೆಯೇ ಪೌರಾಣಿಕ ಜ್ಞಾನವನ್ನೂ ಪ್ರದರ್ಶಿಸಿದ್ದಾನೆ, ಪ್ರಕೃತಿವರ್ಣನೆಯಲ್ಲಿ ಅರಣ್ಯದ ವರ್ಣನೆಯೂ ಪ್ರಮುಖವಾದುದು ಮತ್ತು ಅತಿರಮಣಿಯವಾಗಿರುವುದು ಕಂಡು ಬರುತ್ತದೆ.

**ಪ್ರಕೃತಿಯ ಸೌಂದರ್ಯದ ವರ್ಣನೆಗಳು:-**

ಪ್ರಾತ:ಕಾಲ ಸಮಯದ ಪಶ್ಚಿಮದಿಕ್ಕಿನಲ್ಲಿ ಅಸ್ತಮಿಸುತ್ತಿರುವ ಚಂದ್ರನು, ಹಂಸದಂತೆ ಶ್ವೇತವರ್ಣವನ್ನು ಹೊಂದಿರುವನು, ಆದರೆ ಪೂರ್ವದಿಕ್ಕಿನಲ್ಲಿ

ISBN 978-1-56646-725-4

ಅರುಣರಾಗವು ಹರಡಿ. ಆನೆಯನ್ನು ಕೊಂದ ಸಿಂಹದ ಕೇಸರಗಳಂತೆ ಕೆಂಬಣ್ಣ ಹೊಂದಿರುವ ಸೂರ್ಯನ ಕಿರಣಗಳು ಭೂಮಿಯನ್ನು ಮುಟ್ಟುವಂತಹ ತನ್ನ ರಮಣೀಯ ಕೌಶಲದಿಂದ ಸಹೃದಯರ ಮನಸ್ಸನ್ನು ಶಾಶ್ವತವಾಗಿ ವಶಪಡಿಸಿಕೊಂಡಿದ್ದಾನೆ.

ಶುಕದ ಜನ್ಮವೃತ್ತಾಂತವನ್ನು ವರ್ಣಿಸುವ ಸಂದರ್ಭದಲ್ಲಿ, ಬಾಣನು ತಾನು ನೋಡಿರುವ ಎಲ್ಲ ರೀತಿಯ ಕಾಡುಗಳನ್ನು ಬಣ್ಣಿಸುತ್ತಾನೆ. ಸಕಲ ಜೀವರಾಶಿಜಂತುಗಳಾದ ಪ್ರಾಣಿ, ಪಕ್ಷಿಗಳ ಪರಿಚಯವನ್ನು ಮಾಡಿಸುತ್ತಾನೆ. ಪ್ರತಿಯೊಂದು ಸನ್ನಿವೇಶಗಳನ್ನೂ ಕಣ್ಣಿಗೆ ಕಟ್ಟುವಂತೆ ವರ್ಣನೆ ಮಾಡುತ್ತಾನೆ. ಅಧ್ಯಯನ ಮಾಡುವವರ ಮನ:ದಲ್ಲಿ ಆಯಾ ಪ್ರಸಂಗಗಳು ಅಚ್ಚಳಿಯದೇ ಉಳಿಯುವಂತೆ ಮಾಡುತ್ತಾನೆ ಹಾಗೂ ಮರ, ಗಿಡ, ಪ್ರಪಾತ, ಬೆಟ್ಟಗುಡ್ಡ, ಸೂರ್ಯೋದಯ, ಚಂದ್ರೋದಯಗಳ ಸಜೀವಚಿತ್ರಣವನ್ನು ಮಾಡಿ ಓದುವವರನ್ನು ಮಂತ್ರಮುಗ್ಧರನ್ನಾಗಿ ಮಾಡಿರುತ್ತಾನೆ. ಗಿಳಿಯ ವೃತ್ತಾಂತವನ್ನು ವಿವರಿಸುವಾಗ ಆತನ ಕಾನನದ ಚಿತ್ರಣವನ್ನು ಮಾಡಿದ ರೀತಿಯೂ ಬಾಣಭಟ್ಟನನ್ನು ಶಿಖರಕ್ಕೆ ಕೊಂಡೋಗಿದೆ. ಪಂಪಾ ಸರೋವರದ ವರ್ಣನೆಯ ಸಮಯದಲ್ಲಿ ಶಾಲ್ಮಲೀ ವೃಕ್ಷದ ಬಣ್ಣನೆ ಅಥವಾ ತಮಾಲಲತೆಯ ವರ್ಣನೆಯನ್ನು ಅವಲೋಕಿಸಿದರೆ, ಪರಿಸರದ ಅವಲೋಕನದಲ್ಲಿ ಮತ್ತು ಅಧ್ಯಯನದಲ್ಲಿ ಬಾಣನಿಗೆ ಇರುವ ಕೌಶಲವನ್ನು ನಾವು ತಿಳಿದುಕೊಳ್ಳಬಹುದಾಗಿದೆ.

ಮೇಲ್ಕಂಡಂತೆ ಮಾನವನ ಮತ್ತು ಪ್ರಾಣಿಪಕ್ಷಿಗಳ ಹಾಗೂ ನದಿ ಸರೋವರಗಳು ಸಂಬಂಧವನ್ನು ನೋಡಿದ್ದಾಗ ಮಾನವನು ಶತಯುವಾಗಿ ಆರೋಗ್ಯವಾಗಿರುವುದನ್ನು ಕಾಣಬಹುದಾಗಿದೆ. ಮಾನವನ ಉಳುವಿಗೆ ಉತ್ತಮವಾದ ಪರಿಸರ ಉಳಿವು ಅತ್ಯಗತ್ಯವಾಗಿದೆ.

**ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಮುಖ್ಯ ಆಚರಣೆಗಳನ್ನೂ ಮಾಡುವುದರಿಂದ ರಕ್ಷಣೆ ಸಾಧ್ಯವಾಗುತ್ತದೆ**

ಜೂನ್ 5 ಪರಿಸರ ದಿನ ಏಪ್ರಿಲ್ 22 ಪೃಥ್ವಿ ದಿನಾಚರಣೆ

ಮೇ 22 ಅಂತರಾಷ್ಟ್ರೀಯ ಜೀವ ವೈವಿಧ್ಯತೆಯ ದಿನ ಸೆಪ್ಟಂಬರ್ 16 ವಿಶ್ವ ಓಜೋನ್ ದಿನ ಡಿಸೆಂಬರ್ 3 ವಿಶ್ವ ಸಂರಕ್ಷಣ ದಿನ ಜುಲೈ 6 ವನ ಮಹೋತ್ಸವ ದಿನ

ಅಕ್ಟೋಬರ್ 3 ವಿಶ್ವ ಪ್ರಾಕೃತಿಕ ದಿನ ಜುಲೈ 11 ವಿಶ್ವ ಜನಸಂಖ್ಯಾ ದಿನ

ISBN 978-1-56646-725-4

ಮಾರ್ಚ್ 21 ವಿಶ್ವ ಅರಣ್ಯ ದಿನ ಏಪ್ರಿಲ್ 7 ವಿಶ್ವ ಆರೋಗ್ಯ ದಿನ ಫೆಬ್ರವರಿ 28 ವಿಶ್ವ ವಿಜ್ಞಾನ ದಿನ ಮೇ 31 ಹೋಗೆ ಸೊಪು ವಿರೋಧಿದಿನ ಅಕ್ಟೋಬರ್ 16 ವಿಶ್ವ ಆಹಾರ ದಿನ ಅಕ್ಟೋಬರ್ 17 ವನ್ಯ ಜೀವಿಗಳ ದಿನ ಮುಂತಾದವುಗಳಿಂದ ಪರಿಸರದ ಬಗ್ಗೆ ಅರಿವನ್ನು ಮೂಡಿಸಲು ಈ ಕಾರ್ಯಕ್ರಮಗಳನ್ನು ಮಾಡುವುದು ಅವಶ್ಯಕವಾಗಿದೆ. ಈಗಿನ ಮಕ್ಕಳೇ ಮುಂದಿನ ಪ್ರಜೆಗಳು ಎಂಬಂತೆ ಮಕ್ಕಳಲ್ಲಿ ಪರಿಸರದ ಬಗ್ಗೆ ಅರಿವನ್ನು ಮೂಡಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

**ಉಪಸಂಹಾರ:-**

ಪ್ರಕೃತಿ ಪ್ರೇಮ ಪರಿಶೀಲನೆಯಲ್ಲಿ ಸೂಕ್ಷ್ಮ ದೃಷ್ಟಿ ಕಣ್ಣಿಗೆ ಕಟ್ಟುವಂತೆ ವರ್ಣಿಸುವ ಸಾಮಾರ್ಥ್ಯ, ಬಣ್ಣದ ಮತ್ತು ಶಬ್ದದ ಪ್ರತಿಯೊಂದು ಛಾಯೆಗೂ ಬಳಸುವ ಬೆರಗುಗೊಳಿಸುವ ಪದಸಂಪತ್ತು, ಮಾನವನ ಮನೋವಿಕಾರಗಳ ಆರ್ದ್ರತೆಯ ಬಗ್ಗೆ ಸಂಸ್ಕೃತ ಕವಿಗಳನ್ನು ಯಾರೂ ಮೀರಿಸಿಲ್ಲ.

ಋಗ್ವೇದದಲ್ಲಿ ವನಸ್ಪತಿಗಳು ಗರ್ಭಧರಿಸಿರುವ ಬಗ್ಗೆ, ವರುಣನು ವನಸ್ಪತಿಗಳಿಗೆ ನೀರೆರೆದು ಸ್ಪೂರ್ತಿಯಾಗಿರುವುದು. ಸೋಮನು ವನಸ್ಪತಿಗಳಿಂದ ತೆಗೆದ ರಸವೇ ಅಂಶು, ಸೋಮರಸವೆಂದು ಮರದ ಪಾತ್ರೆಯಲ್ಲಿ ಇರಿಸಿ ಅಂದರು, ಕುಂಟರು ಉಪಯೋಗ ಮಾಡಿರುವುದು.

**ಮಂಡೂಕಸೂಕ್ತದಲ್ಲಿ** ಮಳೆಗಾಲದಲ್ಲಿ ಕಪ್ಪೆಗಳು ಧ್ವನಿಗೈಯುತ್ತಿರುವುದು, ದುಂಬಿಗಳು ವಿವಿಧ ಹೂವುಗಳಿಂದ ರಸವನ್ನು ಆಸ್ವಾದಿಸುತ್ತಿರುವುದು, ಹೇ ಪ್ರಕೃತಿಯೇ ಸಕಲಜೀವರಾಶಿಗಳಿಗೆ ಒಳ್ಳೆಯದನ್ನುಂಟುಮಾಡಲಿ ಎಂದು ಪ್ರಾರ್ಥಿಸಲಾಗುತ್ತಿತ್ತು

**ಐತರೇಯ ಉಪನಿಷತ್ತು, ಮುಂಡಕೋಪನಿಷತ್ತು, ತೈತ್ತರೀಯ ಉಪನಿಷತ್ತು, ಶ್ವೇತಾಶ್ವರ ಉಪನಿಷತ್ತು, ಬೃಹದಾರಣ್ಯಕ ಉಪನಿಷತ್ತು, ಛಾಂದೋಗ್ಯ ಉಪನಿಷತ್ತುಗಳಲ್ಲಿ** ಪರಿಸರದ ಚಿತ್ರಣವನ್ನೂ ಸೋಗಸಾಗಿ ವರ್ಣಿಸಲಾಗಿದೆ.

ರಾಮಾಯಣ ಮತ್ತು ಮಹಾಭಾರತದಲ್ಲಿ ಪ್ರಕೃತಿಯ ಸೌಂದರ್ಯತೆಯನ್ನು ಆರಾಧ್ಯದೈವವೆಂದು ಪೂಜ್ಯನೀಯ ರೂಪದಲ್ಲಿ ಕಾಣುವ ಪ್ರಕೃತಿಯ ಕಲ್ಪನೆಯು ಕಂಡು ಬರುತ್ತದೆ.

ಪ್ರಕೃತಿ ಮತ್ತು ಪರಿಸರವನ್ನು ಹೋಲಿಸುತ್ತಾ "ಶಮೀ ಶಮಯತೇ ಪಾಪಂ" ಎಂದರೆ ಶಮೀ ವೃಕ್ಷವು ಪಾಪವನ್ನು ಪರಿಹರಿಸಿ, ಶತ್ರುಗಳನ್ನು

ISBN 978-1-56646-725-4

ನಾಶಗೊಳಿಸಿ ವಿಜಯಶಾಲಿಯನ್ನಾಗಿ ಮಾಡುತ್ತದೆ. ಶಾಂತಿ ಪರ್ವದ 157ನೇ ಅಧ್ಯಾಯದಲ್ಲಿ ಶಾಲ್ಮಲೀ ವೃಕ್ಷದ ನಿದರ್ಶನದಿಂದ ಭಿಷ್ಮಾಚಾರ್ಯರು ಧರ್ಮರಾಜನಿಗೆ " ಬಲಿಷ್ಠರೊಡನೆ ವೈರತ್ವವನ್ನು ಕಟ್ಟಿಕೊಳ್ಳಬಾರದು" ಎಂಬ ಉಪದೇಶವು ತಿಳಿಯುತ್ತದೆ.

ಕಾಳಿದಾಸನ ಸೂಕ್ಷ್ಮ ದೃಷ್ಟಿಯಿಂದ ಪ್ರಕೃತಿಯಲ್ಲಿರುವ ಸೂಕ್ಷ್ಮ ರಹಸ್ಯಗಳನ್ನು ಸಾವಧಾನವಾಗಿ, ಹೃದಯಂಗಮವಾಗಿ, ಪ್ರಕೃತಿಯು ನಮ್ಮ ಕಣ್ಣಿನ ಮುಂದೆಯೇ ಇರುವಂತೆ ರಚಿಸಿದ್ದಾನೆ. ಬಾಹ್ಯ ಪ್ರಕೃತಿಯ ಚಿತ್ರವನ್ನು ಸೂಕ್ಷ್ಮವಾಗಿ ನಿರೀಕ್ಷಿಸುವುದು ಹಾಗೂ ಗ್ರಹಿಸುವುದು ಮಹತ್ತರವಾದ ವೈಶಿಷ್ಟ್ಯವೇ ಕಾಳಿದಾಸನದ್ದಾಗಿದೆ.

ಬಾಣಭಟ್ಟನ ಪ್ರಕಾರ ಪ್ರಾತ:ಕಾಲ ಸಮಯದ ಪಶ್ಚಿಮದಿಕ್ಕಿನಲ್ಲಿ ಅಸ್ತಮಿಸುತ್ತಿರುವ ಚಂದ್ರನು, ಹಂಸದಂತೆ ಶ್ವೇತವರ್ಣವನ್ನು ಹೊಂದಿರುವನು, ಆದರೆ ಪೂರ್ವದಿಕ್ಕಿನಲ್ಲಿ ಅರುಣರಾಗವು ಹರಡಿ. ಆನೆಯನ್ನು ಕೊಂದ ಸಿಂಹದ ಕೇಸರಗಳಂತೆ ಕೆಂಬಣ್ಣ ಹೊಂದಿರುವ ಸೂರ್ಯನ ಕಿರಣಗಳು ಭೂಮಿಯನ್ನು ಮುಟ್ಟುವಂತಹ ತನ್ನ ರಮಣಿಯ ಕೌಶಲದಿಂದ ಸಹೃದಯರ ಮನಸ್ಸನ್ನು ಶಾಶ್ವತವಾಗಿ ವಶಪಡಿಸಿಕೊಂಡಿದ್ದಾನೆ.

ಶುಕದ ಜನ್ಮವೃತ್ತಾಂತವನ್ನು ವರ್ಣಿಸುವ ಸಂದರ್ಭದಲ್ಲಿ, ಬಾಣನು ತಾನು ನೋಡಿರುವ ಎಲ್ಲ ರೀತಿಯ ಕಾಡುಗಳನ್ನು ಬಣ್ಣಿಸುತ್ತಾನೆ. ಸಕಲ ಜೀವರಾಶಿಜಂತುಗಳಾದ ಪ್ರಾಣಿ, ಪಕ್ಷಿಗಳ ಪರಿಚಯವನ್ನು ಮಾಡಿಸುತ್ತಾನೆ. ಪ್ರತಿಯೊಂದು ಸನ್ನಿವೇಶಗಳನ್ನೂ ಕಣ್ಣಿಗೆ ಕಟ್ಟುವಂತೆ ವರ್ಣನೆ ಮಾಡುತ್ತಾನೆ. ಅಧ್ಯಯನ ಮಾಡುವವರ ಮನ:ದಲ್ಲಿ ಆಯಾ ಪ್ರಸಂಗಗಳು ಅಚ್ಚಳಿಯದೇ ಉಳಿಯುವಂತೆ ಮಾಡುತ್ತಾನೆ ಹಾಗೂ ಮರ, ಗಿಡ, ಪ್ರಪಾತ, ಬೆಟ್ಟಗುಡ್ಡ, ಸೂರ್ಯೋದಯ, ಚಂದ್ರೋದಯಗಳ ಸಜೀವಚಿತ್ರಣವನ್ನು ಮಾಡಿ ಓದುವವರನ್ನು ಮಂತ್ರಮುಗ್ಧರನ್ನಾಗಿ ಮಾಡಿರುತ್ತಾನೆ. ಗಿಳಿಯ ವೃತ್ತಾಂತವನ್ನು ವಿವರಿಸುವಾಗ ಆತನ ಕಾನನದ ಚಿತ್ರಣವನ್ನು ಮಾಡಿದ ರೀತಿಯೂ ಬಾಣಭಟ್ಟನನ್ನು ಶಿಖರಕ್ಕೆ ಕೊಂಡೋಗಿದೆ. ಪಂಪಾ ಸರೋವರದ ವರ್ಣನೆಯ ಸಮಯದಲ್ಲಿ ಶಾಲ್ಮಲೀ ವೃಕ್ಷದ ಬಣ್ಣನೆ ಅಥವಾ ತಮಾಲಲತೆಯ ವರ್ಣನೆಯನ್ನು ಅವಲೋಕಿಸಿದರೆ, ಪರಿಸರದ ಅವಲೋಕನದಲ್ಲಿ ಮತ್ತು ಅಧ್ಯಯನದಲ್ಲಿ ಬಾಣನಿಗೆ ಇರುವ ಕೌಶಲವನ್ನು ನಾವು ತಿಳಿದುಕೊಳ್ಳಬಹುದಾಗಿದೆ.

ಮೇಲ್ಕಂಡಂತೆ ಮಾನವನ ಮತ್ತು ಪ್ರಾಣಿಪಕ್ಷಿಗಳ ಹಾಗೂ ನದಿ ಸರೋವರಗಳು ಸಂಬಂಧವನ್ನು ನೋಡಿದ್ದಾಗ ಮಾನವನು ಶತಯುವಾಗಿ

ISBN 978-1-56646-725-4

ಆರೋಗ್ಯವಾಗಿರುವುದನ್ನು ಕಾಣಬಹುದಾಗಿದೆ. ಮಾನವನ ಉಳುವಿಗೆ ಉತ್ತಮವಾದ ಪರಿಸರ ಉಳಿವು ಅತ್ಯಗತ್ಯವಾಗಿದೆ ಹಾಗೂ ಮಕ್ಕಳಲ್ಲಿ ಪ್ರಕೃತಿಯ ಅರಿವನ್ನು ಮೂಡಿಸುವುದು ನಮ್ಮೆಲ್ಲರ ಆದ್ಯಕರ್ತವ್ಯವಾಗಿದೆ.

ಪರಾಮರ್ಶನ ಗ್ರಂಥಗಳು:-


1. ಸಂಸ್ಕೃತ ಸಾಹಿತ್ಯದ ಇತಿಹಾಸ, – ಮೂಲ ಲೇಖಕ, ಆಚಾರ್ಯ ಬಲದೇವ ಉಪಾಧ್ಯಾಯ, ಅನುವಾದ-ಎಸ್.ರಾಮಚಂದ್ರಶಾಸ್ತ್ರೀ,ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-56
2. ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ, – ಡಾ.ಕೃಷ್ಣಮೂರ್ತಿ, ವಿದ್ವಾನ್ ಎನ್.ರಂಗನಾಥಶರ್ಮ, ವಿದ್ವಾನ್. ಎಚ್.ಕೆ.ಸಿದ್ಧಗಂಗಯ್ಯ, ಕರ್ನಾಟಕ ಸರ್ಕಾರಿ ಪಠ್ಯಪುಸ್ತಕಗಳ ಮುದ್ರಣಾಲಯ, ಬೆಂಗಳೂರು
3. ಕಾದಂಬರೀ, – ಚಂದ್ರಕಾಲ- ಸಂಸ್ಕೃತ ಹಿಂದಿ ವ್ಯಾಖ್ಯಾನಮ್ ಶೇಷರಾಜಶರ್ಮ ರೇಗ್ಮೀ, ಚೌಖಂಬಾ ಸುರಭಾರತೀ ಪ್ರಕಾಶನ, ವಾರಾಣಸೀ
4. ಕಾದಂಬರೀ, – ಮಹಾಕವಿ ಬಾಣಭಟ್ಟ ವಿರಚಿತ ಸಂಸ್ಕೃತ ಹಿಂದಿ ವ್ಯಾಖ್ಯಾನಮ್. ಶ್ರೀ ಪಂಡಿತ. ಸರಯೂಸಾದಪಾಂಡೇಯ: ಎಂ.ಎ, ಚೌಖಂಬಾ ಕೃಷ್ಣದಾಸ ಅಕಾಡಮೀ, ವಾರಾಣಸೀ
5. ಬಾಣನ ಕಾದಂಬರೀ ಸಂಗ್ರಹ, – ಜೆ.ಶ್ರೀನಿವಾಸಮೂರ್ತಿ, ಎಚ್.ಎಸ್.ನಾಗಭೂಷಣ ಭಟ್ಟ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-56
6. ಸಂಸ್ಕೃತ ಸಾಹಿತ್ಯ, – ಪ್ರೊ. ಕೆ.ಎನ್.ಗಂಗಾನಾಯಕ್, ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
7. ಬಾಣ ಕಾದಂಬರೀ, – ಭಾಷಾಂತರ, ಗಂಗಾಧರ ಮಡಿವಾಳೇಶ್ವರ ತುರಮರಿ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು
8. ಸಂಸ್ಕೃತ ಕಾವ್ಯವಲ್ಲರಿ-1, – ಸಂಸ್ಕೃತ ಭಾಷಾ ಪದವಿ ಪಠ್ಯಪುಸ್ತಕ, ಡಾ.ಎಂ.ವಿ.ಪ್ರಪುಲ್ಲ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು56
9. ಹರ್ಷಚರಿತಮ್, – ಸಂಸ್ಕೃತ ಭಾಷಾ ಪದವಿ ಪಠ್ಯಪುಸ್ತಕ, ಡಾ.ಸಿ.ಶಿವಕುಮಾರಸ್ವಾಮಿ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-56
10. ಚಂದ್ರಾಪೀಡ ದಿಗ್ವಿಜಯ:, – ಭಾಷಾಂತರ, ಡಾ.ಟಿ.ಎಸ್. ಕೃಷ್ಣಮೂರ್ತಿ, ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್, ಬೆಂಗಳೂರು-19
11. ಮಹಾಶ್ವೇತಾ ವೃತ್ತಾಂತ, – ಸಂಸ್ಕೃತ ಭಾಷಾ ಪದವಿ ಪಠ್ಯಪುಸ್ತಕ, ಡಾ. ಶ್ರೀ ಶ್ರೀವತ್ಸ, ಡಾ.ಕೆ.ಆರ್.ಕುಮುದವಲ್ಲೀ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-56
12. ಶ್ರೀ ಭೋಜರಾಜ ವಿರಚಿತ ಚಂಪೂರಾಮಾಯಣ ಬಾಲಕಾಂಡ-ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು-56